Centre for Law & Policy Research (CLPR) is a not-for-profit organization dedicated to making the Constitution work for everyone through law and policy research, social and governance interventions and strategic impact litigation.

Transgender rights are at the forefront of gender inclusivity in India since the landmark decision of the Supreme Court in *NALSA* v. *Union of India*. These dialogues gained significant momentum when the Transgender Persons (Protection of Rights) Act, 2019 was enacted. Taking into consideration the vehement opposition to the legislation, CLPR held a community meeting "Conversations on Transgender Persons (Protection of Rights) Act, 2019" to discuss the legal issues and challenges to the law.

Through these discussions, CLPR recognised that the Act and the Rules not being available in regional languages has created a barrier in terms of awareness and discourse. As we believe in complete dissemination of information, CLPR has translated the text into Kannada for wider dissemination among the local transgender community in Karnataka.

This translation of the ***Transgender Persons (Protection of Rights) Rules, 2020*** is made in a private capacity by CLPR and is not an official version by any government.

# ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯ

## ಅಧಿಸೂಚನೆ

ನವ ದೆಹಲಿ, 25ನೇ ಸಪ್ಟೆಂಬರ್, 2020

**ಜಿ.ಎಸ್.ಆರ್.592** (ಇ). – ಅದಂತೆ, ಟ್ರಾನ್ಸ್‌ಜೆಂಡರ್ ವ್ಯಕ್ತಿಗಳ (ಹಕ್ಕುಗಳ ಸಂರಕ್ಷಣೆ) ಕಾಯ್ದೆ 2019 (2019ರ 40 ರಲ್ಲಿ) ರ ವಿಭಾಗ 22 ನೀಡಿರುವ ಅಧಿಕಾರವನ್ನು ಚಲಾಯಿಸುವ ಕರಡು ನಿಯಮಗಳನ್ನು, ಈ ಪ್ರಕಾರ ವಿಭಾಗದ ಉಪ–ವಿಭಾಗದ(1) ಅವಶ್ಯಕತೆಯಂತೆ ಭಾರತ ಸರ್ಕಾರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯವು ಭಾರತದ ಅಸಾಮಾನ್ಯ ಗಜೆಟ್ ಭಾಗ–II, ವಿಭಾಗ 3, ಉಪ–ವಿಭಾಗ (i)ರಲ್ಲಿ ಅಧಿಸೂಚನೆ ಸಂಖ್ಯೆ ಜಿ.ಎಸ್.ಆರ್.441 (ಇ) ದಿನಾಂಕ 13ನೇ ಜುಲೈ, 2020ರ ಈ ಅಧಿಸೂಚನೆಯನ್ನು ಒಳಗೊಂಡಿರುವ ಗೆಜೆಟ್‌ನ ಪ್ರತಿಗಳನ್ನು ಸಾರ್ವಜನಿಕರಿಗೆ ಲಭ್ಯವಾದ ದಿನಾಂಕದಿಂದ ಮೂವತ್ತು ದಿನಗಳ ಒಳಗೆ ಪರಿಣಾಮ ಬೀರುವ ವ್ಯಕ್ತಿಗಳಿಂದ ಆಕ್ಷೇಪಣೆಗಳನ್ನು ಮತ್ತು ಸಲಹೆಗಳನ್ನು ಆಹ್ವಾನಿಸುತ್ತದೆ;

ಅದರಂತೆ, ಈ ಅಧಿಸೂಚನೆಯನ್ನು ಒಳಗೊಂಡಿರುವ ಗೆಜೆಟ್‌ನ ಪ್ರತಿಗಳನ್ನು ದಿನಾಂಕ 13ನೇ ಜುಲೈ, 2020 ರಿಂದ ಸಾರ್ವಜನಿಕರಿಗೆ ಲಭ್ಯವಾಗಿದೆ;

ಅದರಂತೆ, ಈ ಕರಡು ನಿಯಮಗಳಿಗೆ ಸಂಬಂಧಿಸಿದಂತೆ ಸಾರ್ವಜನಿಕರಿಂದ ಪಡೆದ ಆಕ್ಷೇಪಣೆಗಳನ್ನು ಮತ್ತು ಸಲಹೆಗಳನ್ನು ಕೇಂದ್ರ ಸರ್ಕಾರವು ಪರಿಗಣಿಸಿದೆ;

ಈಗ, ಆದ್ದರಿಂದ, ಟ್ರಾನ್ಸ್‌ಜೆಂಡರ್ ವ್ಯಕ್ತಿಗಳ (ಹಕ್ಕುಗಳ ರಕ್ಷಣೆ) ಕಾಯ್ದೆ 2019 (2019ರ 40 ರಲ್ಲಿ) ರ ವಿಭಾಗ 22ರ ಪ್ರಕಾರ ನೀಡಲಾಗಿರುವ ಅಧಿಕಾರವನ್ನು ಚಲಾಯಿಸಲು, ಕೇಂದ್ರ ಸರ್ಕಾರವು ಈ ಕೆಳಗಿನ ನಿಯಮಗಳನ್ನು ಮಾಡಿದ್ದು ಅವುಗಳೆಂದರೆ:

1. **ಸಂಕ್ಷಿಪ್ತ ಶೀರ್ಷಿಕೆ ಮತ್ತು ಜಾರಿ.** – (1) ಈ ಕಾಯ್ದೆಯನ್ನು ಟ್ರಾನ್ಸ್‌ಜೆಂಡರ್ ವ್ಯಕ್ತಿಗಳ (ಹಕ್ಕುಗಳ ರಕ್ಷಣೆ) ಕಾಯ್ದೆ, 2020 ಎಂದು ಇದನ್ನು ಕರೆಯಬಹುದು.

   (2) ಇದು ಕೇಂದ್ರ ಸರ್ಕಾರವು ಅಧಿಕೃತ ಗಜೆಟ್ ಅಧಿಸೂಚನೆಯಲ್ಲಿ ಪ್ರಕಟಿಸಿದ ದಿನಾಂಕದಿಂದ ಜಾರಿಗೆ ಬರುತ್ತದೆ.

2. **ವ್ಯಾಖ್ಯಾನ.** – ಈ ಕಾಯ್ದೆಯು ಸಂದರ್ಭವನ್ನು ಹೊರತು ಪಡಿಸಿ, ಅಗತ್ಯ ಇರುವುದೇನೆಂದರೆ, –
   (ಅ) "ಕಾಯ್ದೆ" ಅಂದರೆ ಟ್ರಾನ್ಸ್‌ಜೆಂಡರ್ ವ್ಯಕ್ತಿಗಳ (ಹಕ್ಕುಗಳ ರಕ್ಷಣೆ) ಕಾಯ್ದೆ 2019 (2019ರ 40);
   (ಆ) "ಅರ್ಜಿದಾರರು" ಅಂದರೆ ನಿಯಮ 3ರ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸುವ ಒಬ್ಬ ಟಾನ್ಸ್‌ಜೆಂಡರ್ ವ್ಯಕ್ತಿ
   (ಇ) "ಅರ್ಜಿ" ಅಂದರೆ ಫಾರಂ –1 ರಂತೆ ನೀಡಿರುವ ಅರ್ಜಿಯ ನಮೂನೆ
   (ಈ) "ಯಾವುದೇ ಅಧಿಕೃತ ದಾಖಲೆಗಳು" ಅಂದರೆ ಅನುಬಂಧ 1 ರಲ್ಲಿ ಪಟ್ಟಿ ಮಾಡಿರುವ ದಾಖಲೆಗಳನ್ನು ಒಳಗೊಂಡಿರುವಂತೆ **ಸೂಕ್ತ ಸರ್ಕಾರವು ಅಧಿಕೃತ ಗಜೆಟ್ ಅಧಿಸೂಚನೆಯ ಮುಖಾಂತರ ಪರಿಷ್ಕರಿಸಬಹುದು.**
   (ಉ) "ಗುರುತಿನ ಪ್ರಮಾಣ ಪತ್ರ" ಅಂದರೆ ಈ ಕಾಯ್ದೆಯ ಫಾರಂ–3 ಅಥವಾ ಫಾರಂ –4 ರಲ್ಲಿ ನೀಡಿರುವಂತೆ ವಿಭಾಗ 6ರ ಅಥವಾ ವಿಭಾಗ 7ರ ಅಡಿಯಲ್ಲಿ ಜಿಲ್ಲಾ ನ್ಯಾಯಾಧೀಶರು ನೀಡಿದ ಪ್ರಮಾಣ ಪತ್ರ
   (ಊ) "ಫಾರಂ" ಅಂದರೆ ಈ ನಿಯಮಗಳಲ್ಲಿ ಸೂಚಿಸಲಾದ ಒಂದು ಫಾರಂ
   (ಋ) "ಗುರುತಿನ ಚೀಟಿ" ಅಂದರೆ ವಿಭಾಗ 6ರ ಪ್ರಕಾರ ಫಾರಂ–5 ರಲ್ಲಿ ಒಬ್ಬ ಟ್ರಾನ್ಸ್‌ಜೆಂಡರ್ ವ್ಯಕ್ತಿಗೆ ನೀಡಿದ ಭಾವಚಿತ್ರ ಹೊಂದಿದ ಗುರುತಿನ ಚೀಟಿ ಅಥವಾ ವಿಭಾಗ 7ರ ಪ್ರಕಾರ ಫಾರಂ–6 ರಲ್ಲಿ ಒಬ್ಬ ಟ್ರಾನ್ಸ್‌ಜೆಂಡರ್ ವ್ಯಕ್ತಿಯ ಲಿಂಗದ ಬದಲಾವಣೆಯ ಬಗ್ಗೆ ಜಿಲ್ಲಾ ನ್ಯಾಯಾಧೀಶರು ನೀಡಿರುವ "ಗುರುತಿನ ಪ್ರಮಾಣ ಪತ್ರ" ಅಥವಾ ಈ ನಿಯಮ ಜಾರಿಗೆ ಬರುವ ಮುನ್ನ ಒಬ್ಬ ಟ್ರಾನ್ಸ್‌ಜೆಂಡರ್ ವ್ಯಕ್ತಿಗೆ ರಾಜ್ಯದ ಪ್ರಾಧೀಕಾರವು ನೀಡಿದ ಗುರುತಿನ ಚೀಟಿ.

(ಋೂ) "ವೈದ್ಯಕೀಯ ಸಂಸ್ಥೆ" ಅಂದರೆ ಯಾವುದೇ ಆಸ್ಪತ್ರೆ ಅಥವಾ ಕ್ಲಿನಿಕ್, ಖಾಸಗಿ ಅಥವಾ ಸಾರ್ವಜನಿಕ, ಗ್ರಾಮೀಣ ಪ್ರದೇಶದ ಅಥವಾ ನಗರ ಅಥವಾ ಸಾಗರೋತ್ತರದಲ್ಲಿರುವ ವೈದ್ಯಕೀಯ ಸಂಸ್ಥೆಯಾಗಿದೆ.

(ಎ) "ವೈದ್ಯಕೀಯ ಮಧ್ಯಸ್ಥಿಕೆ" ಅಂದರೆ ಯಾವುದೇ ಒಬ್ಬ ವ್ಯಕ್ತಿಯು ತಾನು ಸ್ವಯಂ ಗುರುತಿಸಿಕೊಂಡ ಲಿಂಗಕ್ಕೆ ಪರಿವರ್ತನೆಗೊಳ್ಳಲು ಕೈಗೊಂಡ ಯಾವುದೇ ಲಿಂಗ ದೃಢಪಡಿಸುವ ವೈದ್ಯಕೀಯ ಮಧ್ಯಸ್ಥಿಕೆಯಾಗಿದೆ, ಆಪ್ತ ಸಮಾಲೋಚನೆ, ಹಾರ್ಮೋನ್ ಚಿಕಿತ್ಸೆ ಮತ್ತು ಶಸ್ತ್ರಚಿಕಿತ್ಸೆಯ ಮಧ್ಯಸ್ಥಿಕೆಗಳನ್ನು ಒಳಗೊಂಡಿರುತ್ತದೆ ಮತ್ತು ಇವುಗಳಿಗೆ ಸೀಮಿತವಾಗಿರುವುದಿಲ್ಲ.

(ಏ) "ವಿಭಾಗ (ಸೆಕ್ಷನ್)" ಅಂದರೆ ಈ ಕಾಯ್ದೆಯ ಒಂದು ವಿಭಾಗ

(ಐ) ಕಾಯ್ದೆಯಲ್ಲಿ ವ್ಯಾಖ್ಯಾನಿಸದ ಮತ್ತು ವ್ಯಾಖ್ಯಾನಿಸಿರುವ ಎಲ್ಲಾ ಪದಗಳು ಮತ್ತು ಅಭಿವ್ಯಕ್ತಿಗಳು ಬಳಸಿದ್ದು ಕಾಯ್ದೆಯಲ್ಲಿ ಅವುಗಳಿಗೆ ನಿಗದಿಪಡಿಸಿರುವ ಅರ್ಥವನ್ನೇ ಹೊಂದಿರುತ್ತದೆ.

**3. ವಿಭಾಗ 6 ಅಥವಾ ವಿಭಾಗ 7 ರ ಅಡಿಯಲ್ಲಿ ಗುರುತಿನ ಪ್ರಮಾಣ ಪತ್ರವನ್ನು ನೀಡುವ ಅರ್ಜಿ:**

(1) ಒಬ್ಬ ಟ್ರಾನ್ಸ್‌ಜೆಂಡರ್ ವ್ಯಕ್ತಿಯು ಗುರುತಿನ ಪ್ರಮಾಣ ಪತ್ರವನ್ನು ಪಡೆಯಲು ಅಪೇಕ್ಷಿಸಿದಲ್ಲಿ ಫಾರಂ–1 ರಲ್ಲಿ ಸೂಚಿಸಿರುವಂತೆ ಅರ್ಜಿಯನ್ನು ಸಲ್ಲಿಸಬೇಕು.

(2) ಸಂಬಂಧಿತ ರಾಜ್ಯ ಸರ್ಕಾರವು ಆನ್‌ಲೈನ್ ಸೇವೆಗಳನ್ನು ಅಭಿವೃದ್ಧಿ ಪಡಿಸುವವರೆಗೆ ಅರ್ಜಿಯನ್ನು ಖುದ್ದಾಗಿ ಅಥವಾ ಅಂಚೆಯ ಮುಖಾಂತರ ಜಿಲ್ಲಾ ನ್ಯಾಯಾಧೀಶರಿಗೆ ಸಲ್ಲಿಸಬೇಕು ಆನ್‌ಲೈನ್ ಸೇವೆಗಳು ಪ್ರಾರಂಭವಾದ ಮೇಲೆ ಅರ್ಜಿಗಳನ್ನು ಆನ್‌ಲೈನ್ ಮುಖಾಂತರವೇ ಸಲ್ಲಿಸುವಂತೆ ಮಾಡಲಾಗುವುದು;

ದೂರದ ಪ್ರದೇಶಗಳಲ್ಲಿ ಅಥವಾ ಅನಾನುಕೂಲಕರ ಪರಿಸ್ಥಿತಿಗಳಿಂದ ವಾಸಿಸುವ ಟ್ರಾನ್ಸ್‌ಜೆಂಡರ್ ವ್ಯಕ್ತಿಗಳು ಗುರುತಿನ ಪ್ರಮಾಣ ಪತ್ರಕ್ಕಾಗಿ ಅರ್ಜಿಗಳನ್ನು ಸಲ್ಲಿಸಲು ಅನುಕೂಲವಾಗುವ ರೀತಿಯಲ್ಲಿ ಸೂಕ್ತ ಸರ್ಕಾರವು ಸೂಕ್ತವಾದ ರೀತಿಯಲ್ಲಿ ಕ್ರಮಗಳನ್ನು ಕೈಗೊಳ್ಳಬಹುದು.

ಅಪ್ರಾಪ್ತ ಮಗುವಿನ ಸಂದರ್ಭದಲ್ಲಿ, ಅಂತಹ ಅರ್ಜಿಯನ್ನು ಆ ಅಪ್ರಾಪ್ತ ಮಗುವಿನ ಹೆತ್ತವರು ಅಥವಾ ಪೋಷಕರು ಸಲ್ಲಿಸಬಹುದು ಮತ್ತು ಆರೈಕೆ ಮತ್ತು ರಕ್ಷಣೆಯ ಅಗತ್ಯವಿರುವ ಮಗುವಿನ ಸಂದರ್ಭದಲ್ಲಿ, ಬಾಲಾಪರಾಧಿ ನ್ಯಾಯ ((ಆರೈಕೆ ಮತ್ತು ಮಕ್ಕಳ ರಕ್ಷಣೆ) ಕಾಯ್ದೆ, 2015 (2016 ರಲ್ಲಿ 2) ರ ಅಡಿಯಲ್ಲಿರುವ ಸಮರ್ಥ ಪ್ರಾಧಿಕಾರದಿಂದ ಅರ್ಜಿಯನ್ನು ಸಲ್ಲಿಸಬಹುದು.

(3) ಟ್ರಾನ್ಸ್‌ಜೆಂಡರ್ ವ್ಯಕ್ತಿಗಳು ಈ ಕಾಯ್ದೆಯು ಜಾರಿಗೆ ಬರುವ ಮೊದಲು ತಮ್ಮ ಲಿಂಗದ ಬದಲಾವಣೆಯನ್ನು ಅಧಿಕೃತವಾಗಿ ಪುರುಷ, ಸ್ತ್ರೀ ಅಥವಾ ಟ್ರಾನ್ಸ್‌ಜೆಂಡರ್ ಆಗಿ ದಾಖಲಿಸಿದಲ್ಲಿ, ಈ ನಿಯಮಗಳ ಅಡಿಯಲ್ಲಿ ಗುರುತಿನ ಪ್ರಮಾಣ ಪತ್ರಕ್ಕಾಗಿ ಅರ್ಜಿಯನ್ನು ಸಲ್ಲಿಸುವ ಅಗತ್ಯವಿರುವುದಿಲ್ಲ.

ಅಂತಹ ವ್ಯಕ್ತಿಗಳು ಈ ಕಾಯ್ದೆಯ ಅಡಿಯಲ್ಲಿ ಟ್ರಾನ್ಸ್‌ಜೆಂಡರ್ ವ್ಯಕ್ತಿಗಳಿಗೆ ನೀಡಲಾಗುವ ಎಲ್ಲಾ ಹಕ್ಕುಗಳನ್ನು ಮತ್ತು ಸೌಲಭ್ಯಗಳನ್ನು ಆನಂದಿಸುತ್ತಾರೆ.

**4. ಗುರುತಿನ ಪ್ರಮಾಣ ಪತ್ರವನ್ನು ನೀಡುವ ವಿಧಾನ:–** (1) ಅರ್ಜಿದಾರರು ನೀಡಿರುವ ವಿವರಗಳ ನಿಖರತೆಯ ಆಧಾರದ ಮೇಲೆ ಜಿಲ್ಲಾ ನ್ಯಾಯಾಧೀಶರು ಯಾವುದೇ ವೈದ್ಯಕೀಯ ಅಥವಾ ದೈಹಿಕ ಪರೀಕ್ಷೆಯಿಲ್ಲದೆ ಫಾರ್ಮ್ –2 ರಲ್ಲಿ ಯಾವುದೇ ವ್ಯಕ್ತಿಯು ತನ್ನ ಲಿಂಗದ ಗುರುತನ್ನು ಘೋಷಿಸಿ ಸಲ್ಲಿಸಿದ ಅಫಿಡವಿಟನ್ನು ಆಧರಿಸಿ ಅರ್ಜಿಯನ್ನು ಸಂಸ್ಕರಿಸಬಹುದು (processed) ಮತ್ತು ನಂತರ ಅರ್ಜಿದಾರರಿಗೆ ಗುರುತಿನ ಸಂಖ್ಯೆಯನ್ನು ನೀಡಬೇಕು. ಈ ಸಂಖ್ಯೆಯನ್ನು ಅರ್ಜಿಯ ಪುರಾವೆಯಾಗಿ ಉಲ್ಲೇಖಿಸಬಹುದು.

**(2)** ವಾಸಸ್ಥಳವನ್ನು ನಿರ್ಧರಿಸುವ ಉದ್ದೇಶಕ್ಕಾಗಿ, ಅರ್ಜಿದಾರನು ಅರ್ಜಿಯನ್ನು ಸಲ್ಲಿಸಿದ ದಿನಾಂಕದಿಂದ ಜಿಲ್ಲಾ ನ್ಯಾಯಾಧೀಶರ ವ್ಯಾಪ್ತಿಯಲ್ಲಿರುವ ಪ್ರದೇಶದಲ್ಲಿ ವಾಸವಾಗಿರತಕ್ಕದ್ದು ಮತ್ತು ಈ ಪರಿಣಾಮವಾಗಿ ಅಫಿಡವಿಟನ್ನು ಫಾರ್ಮ್ –2 ರಲ್ಲಿ ಸಲ್ಲಿಸಬೇಕು.

**5. ವಿಭಾಗ 6 ರ ಅಡಿಯಲ್ಲಿ ಟ್ರಾನ್ಸ್‌ಜೆಂಡರ್ ವ್ಯಕ್ತಿಗೆ ಗುರುತಿನ ಪ್ರಮಾಣ ಪತ್ರದ ನೀಡುವಿಕೆ** – (1) ನಿಯಮ 4ರಲ್ಲಿ ಒದಗಿಸಿರುವ ಪ್ರಕ್ರಿಯೆಗಳನ್ನು ಅನುಸರಿಸುವ ಮುಖಾಂತರ ಜಿಲ್ಲಾ ನ್ಯಾಯಾಧೀಶರು ಅರ್ಜಿದಾರನಿಗೆ ಫಾರಂ 3ರಂತೆ ವ್ಯಕ್ತಿಯ ಲಿಂಗವನ್ನು ಸೂಚಿಸಿ ಗುರುತಿನ ಪ್ರಮಾಣ ಪತ್ರವನ್ನು ನೀಡಬೇಕು.

**(2)** ಈ ಗುರುತಿನ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಅಫಿದವಿಟ್‌ನೊಂದಿಗೆ ಪೂರ್ಣವಾಗಿ ತುಂಬಿದ ಅರ್ಜಿಯನ್ನು ಸಲ್ಲಿಸಿದ ಮೂವತ್ತು ದಿನಗಳ ಒಳಗೆ ನೀಡಬೇಕು.

(3) ಉಪ ನಿಯಮ (1) ಅಡಿಯಲ್ಲಿ ನೀಡುವ ಪ್ರಮಾಣ ಪತ್ರವು ಲಿಂಗದ ಜೊತೆಗೆ ಹೆಸರು ಮತ್ತು ಭಾವಚಿತ್ರದ ಬದಲಾವಣೆಗೆ ಆಧಾರವಾಗಿದ್ದು, ಅವಶ್ಯಕತೆ ಇದ್ದಲ್ಲಿ ಗುರುತಿನ ಪ್ರಮಾಣ ಪತ್ರದಲ್ಲಿ ನಮೂದಿಸಿದ ಲಿಂಗಕ್ಕೆ ಅನುಗುಣವಾಗಿ ಅನುಬಂಧ–1 ರಲ್ಲಿ ನೀಡಿರುವಂತೆ ಟ್ರಾನ್ಸ್‌ಜೆಂಡರ್ ವ್ಯಕ್ತಿಯ ಎಲ್ಲಾ ಅಧಿಕೃತ ದಾಖಲಾತಿಗಳಲ್ಲಿ ಬದಲಾವಣೆ ಮಾಡಲು ಅನ್ವಯಿಸುತ್ತದೆ.

(4) ಜಿಲ್ಲಾ ನ್ಯಾಯಾಧೀಶರು ಉಪ–ನಿಯಮ (1) ರ ಅಡಿಯಲ್ಲಿ ಗುರುತಿನ ಪ್ರಮಾಣ ಪತ್ರವನ್ನು ನೀಡುವ ಸಮಯದಲ್ಲಿ ಅರ್ಜಿದಾರನಿಗೆ ಫಾರಂ–5 ರಲ್ಲಿ ಟ್ರಾನ್ಸ್‌ಜೆಂಡರ್ ಗುರುತಿನ ಚೀಟಿಯನ್ನು ನೀಡಬೇಕು.

(5) ಸೂಕ್ತ ಸರ್ಕಾರವು ಗುರುತಿನ ಪ್ರಮಾಣ ಪತ್ರ ಮತ್ತು ಟ್ರಾನ್ಸ್‌ಜೆಂಡರ್ ಗುರುತಿನ ಚೀಟಿಯ ನೀಡುವಿಕೆಯ ದಾಖಲಾತಿಯನ್ನು ನಿರ್ವಹಿಸಬೇಕು.

(6) ಅರ್ಜಿದಾರನು ನಿಯಮ 3ರ ಅಡಿಯಲ್ಲಿ ನೀಡಿರುವ ಅರ್ಜಿಯಂತೆ ಅಧಿಕೃತ ದಾಖಲೆಯನ್ನು ನೀಡುವ ಪ್ರಾಧಿಕಾರವು ಹೆಸರು ಅಥವಾ ಲಿಂಗ ಅಥವಾ ಭಾವಚಿತ್ರ ಅಥವಾ ಅರ್ಜಿದಾರನ ಈ ಯಾವುದಾದರೂ ಮಾಹಿತಿಯನ್ನು ಅರ್ಜಿದಾರನು ಅರ್ಜಿ ಸಲ್ಲಿಸಿದ ಹದಿನೈದು ದಿನಗಳ ಒಳಗೆ ಅಧಿಕೃತ ದಾಖಲೆಗಳಲ್ಲಿ ಬದಲಾವಣೆಯನ್ನು ಮಾಡತಕ್ಕದ್ದು.

(7) ಗುರುತಿನ ಪ್ರಮಾಣ ಪತ್ರದ ಪ್ರಕಾರ ಯಾವುದೇ ಅಧಿಕೃತ ದಾಖಲೆಯಲ್ಲಿ ಲಿಂಗ, ಹೆಸರು ಮತ್ತು ಭಾವಚಿತ್ರವನ್ನು ಪರಿಷ್ಕರಿಸುವಾಗ ಹೆಸರು ಅಥವಾ ಲಿಂಗ ಅಥವಾ ಇವೆರಡನ್ನು ಬದಲಾಯಿಸುವುದನ್ನು ಆ ಟ್ರಾನ್ಸ್‌ಜೆಂಡರ್ ವ್ಯಕ್ತಿಯು ಕೋರಿದ್ದಲ್ಲಿ ಬದಲಾಯಿಸಿದ ಅಧಿಕೃತ ದಾಖಲೆಯಲ್ಲಿ ಅವರ ಮೂಲ ಅಧಿಕೃತ ದಾಖಲೆಯ ಕ್ರಮ ಸಂಖ್ಯೆ ಅಥವಾ ಉಲ್ಲೇಖ ಸಂಖ್ಯೆಯನ್ನೇ ಹೊಂದಿರುತ್ತದೆ.

ಗುರುತಿನ ಪ್ರಮಾಣ ಪತ್ರದ ಆಧಾರದ ಮೇಲೆ ಒಬ್ಬ ಟ್ರಾನ್ಸ್‌ಜೆಂಡರ್ ವ್ಯಕ್ತಿಯು ಎಲ್ಲಾ ಸೌಲಭ್ಯಗಳಿಗೆ ಅರ್ಹರಾಗಿರುತ್ತಾರೆ ಅಲ್ಲದೇ ಯಾವುದೇ ರಾಜ್ಯ ಪ್ರಾಧಿಕಾರವು ಗುರುತಿನ ಪ್ರಮಾಣ ಪತ್ರವನ್ನು ಈಗಾಗಲೇ ನೀಡಿದ್ದಲ್ಲಿ ಆ ಟ್ರಾನ್ಸ್‌ಜೆಂಡರ್ ವ್ಯಕ್ತಿಯು ಸೌಲಭ್ಯ ಪಡೆಯುವಿಕೆಯನ್ನು ಮುಂದುವರೆಸುತ್ತಾರೆ.

**6. ಲಿಂಗ ಬದಲಾವಣೆಯ ಪ್ರಮಾಣ ಪತ್ರವನ್ನು ನೀಡುವ ಪ್ರಕ್ರಿಯೆ.–**

(1) ಒಬ್ಬ ಟ್ರಾನ್ಸ್‌ಜೆಂಡರ್ ವ್ಯಕ್ತಿಯು ಗಂಡಾಗಿ ಅಥವಾ ಹೆಣ್ಣಾಗಿ ಲಿಂಗ ದೃಢೀಕರಣ ಪ್ರಕ್ರಿಯೆಗೆ ಸಂಬಂಧಿಸಿದಂತೆ ವೈದ್ಯಕೀಯ ಮಧ್ಯಸ್ಥಿಕೆಗೆ ಒಳಗಾದಲ್ಲಿ, ಅಂತಹ ವ್ಯಕ್ತಿಯು ಫಾರಂ–1 ರ ಜೊತೆಗೆ ಆ ಸಂದರ್ಭದಲ್ಲಿ ಆ ವ್ಯಕ್ತಿಯು ವೈದ್ಯಕೀಯ ಮಧ್ಯಸ್ಥಿಕೆಗೆ ಒಳಗಾದ ವೈದ್ಯಕೀಯ ಸಂಸ್ಥೆಯ ವೈದ್ಯಕೀಯ ಅಧೀಕ್ಷಕರು ಅಥವಾ ಮುಖ್ಯ ವೈದ್ಯಾಧಿಕಾರಿಗಳು ನೀಡಿದ ಪ್ರಮಾಣ ಪತ್ರವನ್ನು ಜಿಲ್ಲಾ ನ್ಯಾಯಾಧೀಶರೊಂದಿಗೆ ಪರಿಷ್ಕೃತ ಗುರುತಿನ ಪ್ರಮಾಣ ಪತ್ರ ನೀಡಲು ಅರ್ಜಿಯನ್ನು ಸಲ್ಲಿಸಬಹುದು.

(2) ಜಿಲ್ಲಾ ನ್ಯಾಯಾಧೀಶರು ಉಪ–ನಿಯಮ (1) ರಲ್ಲಿ ಉಲ್ಲೇಖಿಸಿದಂತೆ ಅರ್ಜಿಯನ್ನು ಪಡೆದ ನಂತರ ವೈದ್ಯಕೀಯ ಪ್ರಮಾಣ ಪತ್ರದ ನೈಜ್ಯತೆಯನ್ನು ಪರಿಶೀಲಿಸಬೇಕು, ಅಲ್ಲದೇ ಈ ಪರಿಶೀಲನೆಯಲ್ಲಿ ಯಾವುದೇ ದೈಹಿಕ ಪರೀಕ್ಷೆ ಒಳಗೊಂಡಿರುವುದಿಲ್ಲ.

(3) ಅರ್ಜಿದಾರನು ಅರ್ಜಿಯನ್ನು ಸಲ್ಲಿಸುವ ದಿನಾಂಕದಿಂದ ಜಿಲ್ಲಾ ನ್ಯಾಯಾಧೀಶರ ವ್ಯಾಪ್ತಿಗೆ ಬರುವ ಪ್ರದೇಶದಲ್ಲಿ ಪ್ರಸ್ತುತ ನಿವಾಸಿಯಾಗಿರಬೇಕು ಮತ್ತು ಫಾರಂ–1 ರಂತೆ ಒಂದು ಅಫಿಡವಿಟನ್ನು ಅರ್ಜಿಯೊಂದಿಗೆ ಲಗತ್ತಿಸಿ ಸಲ್ಲಿಸಬೇಕು ಮತ್ತು ಯಾವುದೇ ಹೆಚ್ಚುವರಿ ಪುರಾವೆಗಳನ್ನು ಕೇಳಲಾಗುವುದಿಲ್ಲ.

7. **ಲಿಂಗ ಬದಲಾವಣೆಯ ಪ್ರಮಾಣ ಪತ್ರವನ್ನು ನೀಡುವ ಪ್ರಕ್ರಿಯೆ.**– (1) ಜಿಲ್ಲಾ ನ್ಯಾಯಾಧೀಶರು ಅರ್ಜಿದಾರನು ಕೋರಿರುವಂತೆ ಆ ವ್ಯಕ್ತಿಯು ತಾನು ಪುರುಷ ಅಥವಾ ಸ್ತ್ರೀ ಎಂದು ಸೂಚಿಸಿ ಫಾರಂ–4 ರಲ್ಲಿ ಅರ್ಜಿದಾರನ ಲಿಂಗದ ಬದಲಾವಣೆಯನ್ನು ಸೂಚಿಸಿ ಪರಿಷ್ಕೃತ ಲಿಂಗ ಪ್ರಮಾಣ ಪತ್ರವನ್ನು ನೀಡಬೇಕು.

(2) ಜಿಲ್ಲಾ ನ್ಯಾಯಾಧೀಶರು ಪರಿಷ್ಕೃತ ಪ್ರಮಾಣ ಪತ್ರವನ್ನು ಉಪ–ನಿಯಮ (1) ಅಡಿಯಲ್ಲಿ ಅರ್ಜಿ ದೊರೆತ ಹದಿನೈದು ದಿನಗಳ ಒಳಗೆ ನೀಡಬೇಕು.

(3) ಉಪ ನಿಯಮ (1) ಅಡಿಯಲ್ಲಿ ನೀಡಿರುವ ಪ್ರಮಾಣ ಪತ್ರವು ಅರ್ಜಿದಾರನಿಗೆ ತನ್ನ ಲಿಂಗ ಜೊತೆಗೆ ಹೆಸರು ಮತ್ತು ಭಾವಚಿತ್ರವನ್ನು ದಾಖಲಿಸಲು ಅಥವಾ ಬದಲಾಯಿಸಲು ಅವಕಾಶವನ್ನು ನೀಡುತ್ತದೆ, ಜೊತೆಗೆ ಅವಶ್ಯಕತೆ ಇದ್ದಲ್ಲಿ ಅನುಬಂಧ–1 ರಲ್ಲಿ ನೀಡಿರುವಂತೆ ಟ್ರಾನ್ಸ್‌ಜೆಂಡರ್ ವ್ಯಕ್ತಿಯ ಎಲ್ಲಾ ಅಧಿಕೃತ ದಾಖಲಾತಿಗಳಲ್ಲಿ ಗುರುತಿನ ಪ್ರಮಾಣ ಪತ್ರದಲ್ಲಿ ನಮೂದಿಸಿದ ಲಿಂಗಕ್ಕೆ ಅನುಗುಣವಾಗಿ ಪುರುಷ ಅಥವಾ ಸ್ತ್ರೀ ಎಂದು ಬದಲಾವಣೆ ಮಾಡಲು ಅವಕಾಶವನ್ನು ನೀಡುತ್ತದೆ.

(4) ಜಿಲ್ಲಾ ನ್ಯಾಯಾಧೀಶರು ಲಿಂಗದ ಬದಲಾವಣೆಯ ಗುರುತಿನ ಪ್ರಮಾಣ ಪತ್ರವನ್ನು ನೀಡುವಾಗ ಅದೇ ಸಮಯದಲ್ಲಿ ಅರ್ಜಿದಾರನಿಗೆ ಫಾರಂ–6 ರಂತೆ ಅರ್ಜಿದಾರನಿಗೆ ಗುರುತಿನ ಚೀಟಿಯನ್ನು ನೀಡಬೇಕು.

(5) ಅರ್ಜಿದಾರನು ಉಪ–ನಿಯಮ (3) ರ ಅಡಿಯಲ್ಲಿ ನೀಡಿರುವ ಅರ್ಜಿಯಂತೆ ಅಧಿಕೃತ ದಾಖಲೆಯ ನೀಡುವ ಪ್ರಾಧಿಕಾರವು ಹೆಸರು ಅಥವಾ ಲಿಂಗ ಅಥವಾ ಭಾವಚಿತ್ರ ಅಥವಾ ಅರ್ಜಿದಾರನ ಈ ಯಾವುದಾದರೂ ಮಾಹಿತಿಯನ್ನು ಅಧಿಕೃತ ದಾಖಲೆಗಳಲ್ಲಿ ಬದಲಾವಣೆಯನ್ನು ಅರ್ಜಿದಾರನು ಅರ್ಜಿಸಲ್ಲಿಸಿದ ಹದಿನೈದು ದಿನಗಳ ಒಳಗೆ ಮಾಡತಕ್ಕದ್ದು.

(6) ಗುರುತಿನ ಪ್ರಮಾಣ ಪತ್ರದ ಪ್ರಕಾರ ಯಾವುದೇ ಅಧಿಕೃತ ದಾಖಲೆಯಲ್ಲಿ ಲಿಂಗ, ಹೆಸರು ಮತ್ತು ಭಾವಚಿತ್ರವನ್ನು ಪರಿಷ್ಕರಿಸುವಾಗ ಹೆಸರು ಅಥವಾ ಲಿಂಗ ಅಥವಾ ಇವೆರಡನ್ನು ಬದಲಾಯಿಸುವುದನ್ನು ಆ ಟ್ರಾನ್ಸ್‌ಜೆಂಡರ್ ವ್ಯಕ್ತಿಯ ಕೋರಿದ್ದಲ್ಲಿ ಬದಲಾಯಿಸಿದ ಅಧಿಕೃತ ದಾಖಲೆಯಲ್ಲಿ ಅವರ ಮೂಲ ಅಧಿಕೃತ ದಾಖಲೆಯ ಕ್ರಮ ಸಂಖ್ಯೆ ಅಥವಾ ಉಲ್ಲೇಖ ಸಂಖ್ಯೆಯನ್ನೇ ಹೊಂದಿರುತ್ತದೆ.

8. **ಅರ್ಜಿಯ ತಿರಸ್ಕರಣೆಯ ಸಂವಹನ** – (1) ನಿಯಮ 3ರ ಅಡಿಯಲ್ಲಿ ಸಲ್ಲಿಸಿರುವ ಅರ್ಜಿಯನ್ನು ತಿರಸ್ಕರಿಸಿದ್ದಲ್ಲಿ, ಜಿಲ್ಲಾ ನ್ಯಾಯಾಧೀಶರು ಅರ್ಜಿಯ ತಿರಸ್ಕರಣೆಯ ಕಾರಣ ಅಥವಾ ಕಾರಣಗಳನ್ನು ಅರ್ಜಿ ಪಡೆದ ಮೂವತ್ತು ದಿನಗಳ ಒಳಗೆ ಅರ್ಜಿದಾರನಿಗೆ ತಿಳಿಸತಕ್ಕದ್ದು.

(2) ನಿಯಮ 8ರ ಉಪ–ನಿಯಮ(1) ರಂತೆ ತಿರಸ್ಕರಣೆಯ ಕಾರಣಗಳ ಸಂವಹನದ ಬಗ್ಗೆ ಅರ್ಜಿಯ ತಿರಸ್ಕರಣೆಯ ಬಗ್ಗೆ ಅರ್ಜಿದಾರನು ಸಲ್ಲಿಸಿದ ಉತ್ತರದ ಆಧಾರದ ಮೇಲೆ ಜಿಲ್ಲಾ ನ್ಯಾಯಾಧೀಶರು ತಿರಸ್ಕರಣೆಯ ತೀರ್ಮಾನಗಳನ್ನು ಅರ್ಜಿ ತಿರಸ್ಕರಿಸಿದ ದಿನಾಂಕದಿಂದ ಆರವತ್ತು ದಿನಗಳ ಒಳಗೆ ಪರಿಶೀಲಿಸಬಹುದು.

9. **ಮೇಲ್ಮನವಿ ಸಲ್ಲಿಸುವ ಹಕ್ಕು** – ಅರ್ಜಿಯನ್ನು ತಿರಸ್ಕರಿಸಿದ ದಿನಾಂಕದಿಂದ ತೊಂಬತ್ತು ದಿನಗಳ ಒಳಗೆ ಸೂಕ್ತ ಸರ್ಕಾರವು ಅಧಿಸೂಚನೆಯ ಮೂಲಕ ಅಂತಿಮ ಆದೇಶಕ್ಕಾಗಿ ಗೊತ್ತುಪಡಿಸಿದ ಸೂಕ್ತ ಪ್ರಾಧಿಕಾರಕ್ಕೆ ಮೇಲ್ಮನವಿ ಸಲ್ಲಿಸುವ ಹಕ್ಕನ್ನು ಅರ್ಜಿದಾರರು ಹೊಂದಿರುತ್ತಾರೆ.

10. **ಸೂಕ್ತ ಸರ್ಕಾರದಿಂದ ಟ್ರಾನ್ಸ್‌ಜೆಂಡರ್ ವ್ಯಕ್ತಿಗಳಿಗೆ ಕಲ್ಯಾಣ ಕ್ರಮಗಳು, ಶಿಕ್ಷಣ, ಸಾಮಾಜಿಕ ಭದ್ರತೆ ಮತ್ತು ಆರೋಗ್ಯ** –
(1) ಟ್ರಾನ್ಸ್‌ಜೆಂಡರ್ ವ್ಯಕ್ತಿಗಳ ಹಕ್ಕುಗಳ ಮತ್ತು ಅವಶ್ಯಕತೆಗಳ ರಕ್ಷಣೆಯ ಉದ್ದೇಶಕ್ಕಾಗಿ ಮತ್ತು ಸರ್ಕಾರವು ರೂಪಿಸಿದ ಯೋಜನೆಗಳ ಮತ್ತು ಕಲ್ಯಾಣ ಕ್ರಮಗಳ ಅನುಕೂಲತೆಯನ್ನು ಅವರು ಪಡೆಯಲು ಸೂಕ್ತ ಸರ್ಕಾರವು ಕಲ್ಯಾಣ ಮಂಡಳಿಯನ್ನು ಸ್ಥಾಪಿಸಬೇಕು.

(2) ಸೂಕ್ತ ಸರ್ಕಾರವು ಟ್ರಾನ್ಸ್‌ಜೆಂಡರ್ ವ್ಯಕ್ತಿಗಳ ಹಕ್ಕುಗಳನ್ನು ಮತ್ತು ಅವಶ್ಯಕತೆಗಳನ್ನು ರಕ್ಷಿಸಿ ಅವರನ್ನು ಸೇರ್ಪಡೆಗೊಳಿಸಲು ಪ್ರಸ್ತುತ ಶಿಕ್ಷಣ, ಸಾಮಾಜಿಕ ಭದ್ರತೆ, ಆರೋಗ್ಯ ಯೋಜನೆಗಳು, ಕಲ್ಯಾಣ ಕ್ರಮಗಳು, ವೃತ್ತಿಪರ

ತರಬೇತಿ ಮತ್ತು ಸ್ವಯಂ–ಉದ್ಯೋಗ ಯೋಜನೆಗಳನ್ನು ಪರಿಶೀಲಿಸಬೇಕು ಮತ್ತು ಸರ್ಕಾರವು ರೂಪಿಸಿದಂತಹ ಯೋಜನೆಗಳ ಮತ್ತು ಕಲ್ಯಾಣ ಕ್ರಮಗಳ ಅನುಕೂಲತೆಯನ್ನು ಅವರು ಪಡೆಯುವಂತೆ ಮಾಡಬೇಕು.

(3) ಸೂಕ್ತ ಸರ್ಕಾರವು ಅನುಬಂಧ– II ರಲ್ಲಿ ಸೂಚಿಸಿರುವಂತೆ ಟ್ರಾನ್ಸ್‌ಜೆಂಡರ್ ವ್ಯಕ್ತಿಗಳಿಗಾಗಿ ಶಿಕ್ಷಣ, ಸಾಮಾಜಿಕ ಭದ್ರತೆ, ಆರೋಗ್ಯ ಯೋಜನೆ ಮತ್ತು ಕಲ್ಯಾಣ ಯೋಜನೆ ಮತ್ತು ಕಾರ್ಯಕ್ರಮಗಳನ್ನು ಟ್ರಾನ್ಸ್‌ಜೆಂಡರ್ ಸಂವೇದಿತ, ಕಳಂಕ–ರಹಿತ ಮತ್ತು ತಾರತಮ್ಯ–ರಹಿತವಾದ ರೀತಿಯಲ್ಲಿ ರೂಪಿಸಬೇಕು.

(4) ಸೂಕ್ತ ಸರ್ಕಾರವು ಯಾವುದೇ ಸರ್ಕಾರಿ ಅಥವಾ ಖಾಸಗಿ ಸಂಸ್ಥೆಯಲ್ಲಿ, ಅಥವಾ ತಮ್ಮ ವ್ಯಾಪ್ತಿಯಲ್ಲಿರುವ ಖಾಸಗೀ ಮತ್ತು ಸರ್ಕಾರಿ ಶೈಕ್ಷಣಿಕ ಸಂಸ್ಥೆಗಳಲ್ಲಿ ತಾರತಮ್ಯವನ್ನು ನಿಷೇಧಿಸಲು ಸಮರ್ಪಕವಾದ ಕ್ರಮಗಳನ್ನು ಕೈಗೊಳ್ಳಬೇಕು ಮತ್ತು ಸ್ಮಶಾನಗಳನ್ನು ಒಳಗೊಂಡಂತೆ ಸಾಮಾಜಿಕ ಮತ್ತು ಸಾರ್ವಜನಿಕ ಸ್ಥಳಗಳಿಗೆ ಸಮಾನವಾದ ಪ್ರವೇಶವನ್ನು ಖಾತರಿಪಡಿಸಬೇಕು.

(5) ಸೂಕ್ತ ಸರ್ಕಾರವು ಈ ಕಾಯ್ದೆಯ ವಿಭಾಗ 12 ರ ಉಪ–ವಿಭಾಗ (3) ರಲ್ಲಿ ಉಲ್ಲೇಖಿಸಿದಂತೆ ಸಾಂಸ್ಥಿಕ ಮತ್ತು ಮೂಲ ಸೌಕರ್ಯಗಳ ಸೌಲಭ್ಯಗಳಾದ ಪುನರ್ವಸತಿ ಕೇಂದ್ರ ಒಳಗೊಂಡಂತೆ ಆದರೆ ಅವುಗಳಿಗೆ ಸೀಮಿತವಾಗಿರದಂತೆ, ಪ್ರತ್ಯೇಕ ಹ್ಯೂಮನ್ ಇಮ್ಯೂನೋಡೆಫಿಶಿಯೆನ್ಸಿ ವೆರಸ್ ಸೆರೋ–ಸರ್ವೇಲೆನ್ಸ್ ಕೇಂದ್ರಗಳನ್ನು, ಆಸ್ಪತ್ರೆಗಳಲ್ಲಿ ಪ್ರತ್ಯೇಕ ವಾರ್ಡ್ ಮತ್ತು ಸ್ಥಾಪನೆಗಳಲ್ಲಿ ಪ್ರತ್ಯೇಕ ಶೌಚಾಲಯಗಳನ್ನು ಟ್ರಾನ್ಸ್‌ಜೆಂಡರ್ ವ್ಯಕ್ತಿಗಳ ಹಕ್ಕುಗಳ ರಕ್ಷಣೆಯ ಈ ನಿಯಮಗಳು ಜಾರಿಗೆ ಬಂದ ದಿನಾಂಕದಿಂದ ಎರಡು ವರ್ಷಗಳ ಒಳಗೆ ರಚಿಸಬೇಕು.

(6) ಸೂಕ್ತ ಸರ್ಕಾರವು ಶಿಕ್ಷಣ, ಸಂವಹನ ಮತ್ತು ತರಬೇತಿಗಳ ಮುಖಾಂತರ ಟ್ರಾನ್ಸ್‌ಜೆಂಡರ್ ವ್ಯಕ್ತಿಗಳು ಅವರಾಗಿಯೇ ಕಲ್ಯಾಣ ಯೋಜನೆಗಳನ್ನು ಪಡೆಯುವಂತೆ ಅವರಿಗೆ ಜಾಗೃತಿ ಮೂಡಿಸುವ ಆಂದೋಲನಗಳನ್ನು ಕೈಗೊಳ್ಳಬೇಕು ಮತ್ತು ಟ್ರಾನ್ಸ್‌ಜೆಂಡರ್ ವ್ಯಕ್ತಿಗಳಿಗೆ ಅವರ ಹಕ್ಕುಗಳ ಬಗ್ಗೆ ತರಬೇತಿ ನೀಡಬೇಕು ಜೊತೆಗೆ ಟ್ರಾನ್ಸ್‌ಜೆಂಡರ್ ವ್ಯಕ್ತಿಗಳ ವಿರುದ್ಧ ನಡೆಯುವ ಕಳಂಕ ಮತ್ತು ತಾರತಮ್ಯದ ನಿರ್ಮೂಲನೆ ಮಾಡಬೇಕು ಮತ್ತು ಅದರ ಪರಿಣಾಮಗಳನ್ನು ತಗ್ಗಿಸಬೇಕು.

(7) ಸೂಕ್ತ ಸರ್ಕಾರವು ತಮ್ಮ ವ್ಯಾಪ್ತಿಯಲ್ಲಿರುವ ಸಂಸ್ಥೆಗಳಿಗೆ ಮತ್ತು ಸ್ಥಾಪನೆಗಳಿಗೆ ಈ ಕೆಳಗಿನವುಗಳನ್ನು ಒಳಗೊಂಡಿರುವಂತೆ ಸಂವೇದನೆಗೊಳಿಸಬೇಕು:

(ಅ) ಸಮಾನತೆ ಮತ್ತು ಲಿಂಗ ವೈವಿಧ್ಯತೆಯ ಬಗ್ಗೆ ಗೌರವವನ್ನು ಬೆಳೆಸಲು ಶಾಲಾ ಮತ್ತು ಕಾಲೇಜುಗಳ ಶಿಕ್ಷಕರಿಗೆ ಮತ್ತು ಅಧ್ಯಾಪಕರಿಗೆ ಸಂವೇದನೆಗೊಳಿಸಬೇಕು, ಶೈಕ್ಷಣಿಕ ಪಠ್ಯಕ್ರಮಗಳಲ್ಲಿ ಬದಲಾವಣೆಯನ್ನು ತರಬೇಕು;

(ಆ) ಆರೋಗ್ಯ ವೃತ್ತಿಪರರಿಗೆ ಸಂವೇದನೆಗೊಳಿಸಬೇಕು;

(ಇ) ಕೆಲಸದ ಸ್ಥಳಗಳಲ್ಲಿ ಸಂವೇದನಾ ಕಾರ್ಯಕ್ರಮಗಳು;

(ಈ) ದೂರು ಅಧಿಕಾರಿಗಳಿಗೆ ಸಂವೇದನಾ ಕಾರ್ಯಕ್ರಮಗಳು.

(8) ಎಲ್ಲಾ ಶೈಕ್ಷಣಿಕ ಸಂಸ್ಥೆಗಳಲ್ಲಿ ಟ್ರಾನ್ಸ್‌ಜೆಂಡರ್ ವ್ಯಕ್ತಿಗಳಿಗೆ ಯಾವುದೇ ಕಿರುಕುಳ ಅಥವಾ ತಾರತಮ್ಯದ ಪ್ರಕರಣ ನಡೆದ ಸಂದರ್ಭದಲ್ಲಿ ಸೇವೆಗಳನ್ನು ಪಡೆಯಲು ಸಮಿತಿಗಳನ್ನು ಹೊಂದಿರಬೇಕು ಅಲ್ಲದೇ ಶಿಕ್ಷಕರುಗಳನ್ನು ಒಳಗೊಂಡಂತೆ ಅವರನ್ನು ಬೆದರಿಸುವ ವ್ಯಕ್ತಿಗಳ ಉಪಸ್ಥಿತಿಯಿಂದ ಟ್ರಾನ್ಸ್‌ಜೆಂಡರ್ ವಿದ್ಯಾರ್ಥಿಗಳಿಗೆ ತೊಂದರೆ ಆಗುವುದಿಲ್ಲ ಎಂದು ಖಚಿತಪಡಿಸುವ ಅಧಿಕಾರವನ್ನು ಈ ಸಮಿತಿಯು ಹೊಂದಿರಬೇಕು.

(9) ಸೂಕ್ತ ಸರ್ಕಾರವು ಸಾಂಸ್ಥಿಕ ಮತ್ತು ಮೂಲ ಸೌಕರ್ಯಗಳ ಸೌಲಭ್ಯಗಳಾದ ತಾತ್ಕಾಲಿಕ ಆಶ್ರಯ, ಅಲ್ಪಾವಧಿ ಮನೆಗಳು ಮತ್ತು ವಸತಿಗಳು, ಆಸ್ಪತ್ರೆಗಳಲ್ಲಿ ಪುರುಷ ಅಥವಾ ಸ್ತ್ರೀ ಅಥವಾ ಪ್ರತ್ಯೇಕ ವಾರ್ಡ್ ಮತ್ತು ಸಂಸ್ಥೆಯಲ್ಲಿ ಶೌಚಾಲಯದ ಆಯ್ಕೆಗಳನ್ನು ಒಳಗೊಂಡಂತೆ ಆದರೆ ಅವುಗಳಿಗೆ ಸೀಮಿತವಾಗಿರದಂತೆ ಟ್ರಾನ್ಸ್‌ಜೆಂಡರ್ ವ್ಯಕ್ತಿಗಳ ಹಕ್ಕುಗಳ ರಕ್ಷಣೆಯ ಈ ನಿಯಮಗಳು ಜಾರಿಗೆ ಬಂದ ದಿನಾಂಕದಿಂದ ಎರಡು ವರ್ಷಗಳ ಒಳಗೆ ರಚಿಸಬೇಕು.

**11. ತಾರತಮ್ಯ–ರಹಿತವಾಗಿರಲು ನಿಬಂಧನೆಗಳು.–** (1) ಸೂಕ್ತ ಸರ್ಕಾರವು ಯಾವುದೇ ಸರ್ಕಾರಿ ಅಥವಾ ಖಾಸಗೀ ಸಂಸ್ಥೆ ಅಥವಾ ಸ್ಥಾಪನೆಯ ಕ್ಷೇತ್ರಗಳಾದ ಶಿಕ್ಷಣ, ಉದ್ಯೋಗ, ಆರೋಗ್ಯ ಆರೈಕೆ, ಸಾರ್ವಜನಿಕ ಸಾರಿಗೆ ವ್ಯವಸ್ಥೆ, ಸಾರ್ವಜನಿಕ ಜೀವನದಲ್ಲಿ ಭಾಗವಹಿಸುವಿಕೆ, ಕ್ರೀಡೆ, ವಿರಾಮ ಮತ್ತು ಮನರಂಜನೆ ಮತ್ತು ಸಾರ್ವಜನಿಕ ಅಥವಾ ಖಾಸಗೀ

ಕಚೇರಿನ್ನು ಹೊಂದುವ ಅವಕಾಶಗಳನ್ನು ಒಳಗೊಂಡಂತೆ ತಾರತಮ್ಯವನ್ನು ನಿಷೇಧಿಸಲು ಸಮರ್ಪಕವಾದ ಕ್ರಮಗಳನ್ನು ಕೈಗೊಳ್ಳಬೇಕು.

(2) ಸೂಕ್ತ ಸರ್ಕಾರವು ಈ ನಿಯಮಗಳು ಜಾರಿಗೆ ಬಂದ ದಿನಾಂಕದಿಂದ ಎರಡು ವರ್ಷಗಳ ಒಳಗೆ ಈ ಕಾಯ್ದೆಯ ನಿಬಂಧನೆಗಳಿಗೆ ಒಳಪಟ್ಟಂತೆ ಟ್ರಾನ್ಸ್‌ಜೆಂಡರ್ ವ್ಯಕ್ತಿಗಳನ್ನು ರಕ್ಷಿಸಲು ಕ್ರಮಗಳನ್ನು ಮತ್ತು ಪ್ರಕ್ರಿಯೆಗಳನ್ನು ಹೊಂದಿರುವ ಒಂದು ಸಮಗ್ರವಾದ ನೀತಿಯನ್ನು ರಚಿಸಬೇಕು.

(3) ಉಪ–ವಿಭಾಗ (2) ರ ಅಡಿಯಲ್ಲಿ ಅಪಾಯದಲ್ಲಿರುವ ಟ್ರಾನ್ಸ್‌ಜೆಂಡರ್ ಸಮುದಾಯದವರನ್ನು ರಕ್ಷಿಸಲು ಆಡಳಿತಾತ್ಮಕ ಮತ್ತು ಪೋಲಿಸ್ ಕ್ರಮಗಳನ್ನು ತಡೆಗಟ್ಟುವುದನ್ನು ಒಳಗೊಂಡಂತೆ ನೀತಿಯನ್ನು ರೂಪಿಸಬೇಕು.

(4) ಟ್ರಾನ್ಸ್‌ಜೆಂಡರ್ ವ್ಯಕ್ತಿಗಳಿಗೆ ಈ ಕಾಯ್ದೆಯ ವಿಭಾಗ 18 ರ ಅಥವಾ ಬೇರೆ ಯಾವುದೇ ಕಾನೂನಿನ ಅಡಿಯಲ್ಲಿ ಮಾಡಿದ ಅಪರಾಧಗಳಿಗೆ ಸಂಬಂಧಿಸಿದ ವ್ಯಕ್ತಿಗಳ ವಿರುದ್ಧ ಸಮಯಕ್ಕೆ ಸರಿಯಾಗಿ ಕಾನೂನು ಕ್ರಮ ಕೈಗೊಳ್ಳಲಾಗಿದೆಯೆ ಎಂದು ಮೇಲ್ವಿಚಾರಣೆ ಮಾಡುವುದು ಸೂಕ್ತ ಸರ್ಕಾರದ ಜವಾಬ್ದಾರಿಯಾಗಿರುತ್ತದೆ.

(5) ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ನ್ಯಾಯಾಧೀಶರ ಉಸ್ತುವಾರಿಯಲ್ಲಿ ಮತ್ತು ರಾಜ್ಯ ಮಟ್ಟದಲ್ಲಿ ಪೋಲಿಸ್ ಮಹಾ ನಿರ್ದೇಶಕರ ಉಸ್ತುವಾರಿಯಲ್ಲಿ ಟ್ರಾನ್ಸ್‌ಜೆಂಡರ್ ವ್ಯಕ್ತಿಗಳ ವಿರುದ್ಧ ಅಪರಾಧ ಪ್ರಕರಣಗಳ ಮೇಲ್ವಿಚಾರಣೆನ್ನು ನಡೆಸಲು ಮತ್ತು ಪ್ರಕರಣಗಳ ಸಮಯೋಚಿತ ದಾಖಲಾತಿ, ತನಿಖೆ ಮತ್ತು ಕಾನೂನು ಕ್ರಮವನ್ನು ಖಾತರಿಪಡಿಸಲು ಪ್ರತೀ ರಾಜ್ಯ ಸರ್ಕಾರವು ಟ್ರಾನ್ಸ್‌ಜೆಂಡರ್ ರಕ್ಷಣಾ ಘಟಕವನ್ನು ಸ್ಥಾಪಿಸಬೇಕು.

**12. ಉದ್ಯೋಗದಲ್ಲಿ ಸಮಾನ ಅವಕಾಶಗಳು.–** (1) ಎಲ್ಲಾ ಸ್ಥಾಪನೆಗಳು ಉದ್ಯೋಗವನ್ನು ಒಳಗೊಂಡಂತೆ ಮೂಲ ಸೌಕರ್ಯಗಳ ಹೊಂದಾಣಿಕೆ, ನೇಮಕಾತಿ, ಉದ್ಯೋಗದ ಪ್ರಯೋಜನಗಳು, ಪದೋನ್ನತಿ ಮತ್ತು ಇತರ ಸಂಬಂಧಿತ ವಿಷಯಗಳಿಗೆ ಸೀಮಿತವಾಗಿರದೇ ಸಂಬಂಧಿತ ಯಾವುದೇ ವಿಷಯಗಳಲ್ಲಿ ಆ ಟ್ರಾನ್ಸ್‌ಜೆಂಡರ್ ವ್ಯಕ್ತಿಗಳಿಗೆ ತಾರತಮ್ಯ ಆಗದೇ ಇರುವುದನ್ನು ಖಾತರಿಪಡಿಸಲು ಸುರಕ್ಷಿತವಾದ ಕೆಲಸದ ವಾತಾವರಣವನ್ನು ಕಲ್ಪಿಸುವ ಎಲ್ಲಾ ಕ್ರಮಗಳನ್ನು ಅನುಷ್ಠಾನಗೊಳಿಸಬೇಕು.

(2) ಪ್ರತೀ ಸ್ಥಾಪನೆಗಳು ಟ್ರಾನ್ಸ್‌ಜೆಂಡರ್ ವ್ಯಕ್ತಿಗಳಿಗಾಗಿ ಸಮಾನ ಅವಕಾಶ ನೀತಿಯನ್ನು ಪ್ರಕಟಿಸಬೇಕು.

(3) ಸ್ಥಾಪನೆಗಳು ಸಮಾನ ಅವಕಾಶದ ನೀತಿಯನ್ನು ದೂರು ಅಧಿಕಾರಿ ವಿವರಗಳನ್ನು ಒಳಗೊಂಡಂತೆ ಆದ್ಯತೆಯಲ್ಲಿ ಅವರ ವೆಬ್‌ಸೈಟ್‌ನಲ್ಲಿ ಪ್ರದರ್ಶಿಸಬೇಕು ಮತ್ತು ವೆಬ್‌ಸೈಟ್‌ನಲ್ಲಿ ಪ್ರದರ್ಶಿಸಲು ಸಾಧ್ಯವಾಗದಿದ್ದಲ್ಲಿ ಸ್ಥಾಪನೆಯಲ್ಲಿ ಎದ್ದು ಕಾಣುವ ಆವರಣದಲ್ಲಿ ಪ್ರದರ್ಶಿಸಬೇಕು.

(4) ಸ್ಥಾಪನೆಯ ಸಮಾನ ಅವಕಾಶದ ನೀತಿಯು ಈ ಕೆಳಗಿನ ವಿವರಗಳನ್ನು ಹೋಂದಿರತಕ್ಕದ್ದು–

(ಅ) ಮೂಲ ಸೌಕರ್ಯ ಸೌಲಭ್ಯಗಳು (ಯೂನಿಸೆಕ್ಸ್ ಶೌಚಾಲಯಗಳು), ಇರುವ ಸುರಕ್ಷತೆ ಮತ್ತು ಭದ್ರತಾ ಕ್ರಮಗಳು (ಸಾರಿಗೆ ಮತ್ತು ಕಾವಲುಗಾರರು) ಮತ್ತು ಸೌಕರ್ಯಗಳನ್ನು (ನೈರ್ಮಲ್ಯ ಉತ್ಪನ್ನಗಳು) ಟ್ರಾನ್ಸ್‌ಜೆಂಡರ್ ವ್ಯಕ್ತಿಗಳಿಗೆ ಅವರು ಪರಿಣಾಮಕಾರಿಯಾಗಿ ಸ್ಥಾಪನೆಯಲ್ಲಿ ತಮ್ಮ ಕರ್ತವ್ಯವನ್ನು ನಿರ್ವಹಿಸಲು ಅನುಕೂಲಪಡಿಸಬೇಕು;

(ಆ) ಉದ್ಯೋಗಿಗಳ ಸೇವಾ ಪರಿಸ್ಥಿತಿಗಳಿಗೆ ಸಂಬಂಧಿಸಿದಂತೆ ಕಂಪನಿಯ ಎಲ್ಲಾ ನಿಯಮಗಳು ಮತ್ತು ನಿಬಂಧನೆಗಳ ಅನ್ವಯಿಸುವಿಕೆ;

(ಇ) ಉದ್ಯೋಗಿಗಳ ಲಿಂಗ ಗುರುತಿಸುವಿಕೆಯ ಗೌಪ್ಯತೆ;

(ಈ) ಅಧಿಕಾರಿಗಳ ದೂರು

**13. ದೂರು ಪರಿಹಾರ.–** ಸೂಕ್ತ ಸರ್ಕಾರವು ವಿಭಾಗ 11ಕ್ಕೆ ಅನುಗುಣವಾಗಿ ಪ್ರತಿಯೊಂದು ಸ್ಥಾಪನೆಯಲ್ಲಿ ದೂರು ಅಧಿಕಾರಿಯನ್ನು ಈ ನಿಯಮಗಳು ಅಧಿಸೂಚನೆ ಜಾರಿಗೆ ಬಂದ ದಿನಾಂಕದಿಂದ ಮೂವತ್ತು ದಿನಗಳ ಒಳಗೆ ನೇಮಿಸಬೇಕು.

(2) ದೂರು ಅಧಿಕಾರಿಯು ದೂರುಗಳನ್ನು ಪಡೆದ ಹದಿನೈದು ದಿನಗಳ ಒಳಗೆ ಪಡೆದ ದೂರುಗಳ ಬಗ್ಗೆ ವಿಚಾರಣೆಯನ್ನು ನಡೆಸಬೇಕು.

(3) ದೂರು ಅಧಿಕಾರಿಯು ವಿಚಾರಣೆಯ ವರದಿಯನ್ನು ಸಲ್ಲಿಸಿದ ದಿನಾಂಕದಿಂದ ಹದಿನೈದು ದಿನಗಳ ಒಳಗೆ ಸ್ಥಾಪನೆಯ ಮುಖ್ಯಸ್ಥರು ಸಲ್ಲಿಸಿದ ವಿಚಾರಣಾ ವರದಿಯ ಮೇಲೆ ಕ್ರಮವನ್ನು ಕೈಗೊಳ್ಳಬೇಕು.

(4) ಮೇಲಿನ ಸಮಯ ಮಿತಿಗೆ ಅನುಗುಣವಾಗಿ ಕ್ರಮ ಕೈಗೊಳ್ಳದ ಎಲ್ಲಾ ಪ್ರಕರಣಗಳ ಬಗ್ಗೆ ಸ್ಥಾಪನೆಯ ಮುಖ್ಯಸ್ಥರು ತಕ್ಷಣ ಕ್ರಮ ತೆಗೆದುಕೊಳ್ಳಬೇಕು.

(5) ಸೂಕ್ತ ಸರ್ಕಾರವು ಈ ಕಾಯ್ದೆಯ ಅಧ್ಯಾಯ 5 ರ ನಿಬಂಧನೆಗಳು ಅದರಲ್ಲೂ ವಿಭಾಗ 12ರ ಉಪ–ವಿಭಾಗ (1) ಮತ್ತು (2)ನ್ನು ವಿಶೇಷವಾಗಿ ಉಲ್ಲೇಖಿಸಿ ಒಂದು ವರ್ಷಗಳ ಸಮಯದ ಒಳಗೆ ದೂರು ಪರಿಹಾರ ವ್ಯವಸ್ಥೆಯನ್ನು ಸಹಾಯವಾಣಿ ಮತ್ತು ಔಟ್‌ರೀಚ್ ಕೇಂದ್ರಗಳ ಮುಖಾಂತರ ಕಾರ್ಯನಿರ್ವಹಿಸುವಂತೆ ಸ್ಥಾಪಿಸಬೇಕು.

(6) ದೂರು ಪರಿಹಾರ ವ್ಯವಸ್ಥೆಯು ದೂರುಗಳನ್ನು ದೂರು ಸಹಾಯವಾಣಿಯ ಬಳಿಗೆ ತಂದ ದಿನಾಂಕದಿಂದ ಮತ್ತು ವಿಭಾಗ 18ರಲ್ಲಿ ನಿಗದಿಪಡಿಸಿದ ದಂಡವನ್ನು ವಿಧಿಸುವ ಮೂಲಕ ಮೂವತ್ತು ದಿನಗಳ ಒಳಗೆ ದೂರುಗಳ ಬಗೆಹರಿಸುವಿಕೆಯನ್ನು ಖಾತರಿಪಡಿಸಬೇಕು.

(7) ಸೂಕ್ತ ಸರ್ಕಾರವು ಅದರ ವ್ಯಾಪ್ತಿಗೆ ಬರುವ ಎಲ್ಲಾ ಸ್ಥಾಪನೆಗಳಲ್ಲಿ ದಾಖಲಾದ ದೂರುಗಳ ಸಂಖ್ಯೆ, ವಿಚಾರಣೆ ಮತ್ತು ಕ್ರಮಕೈಗೊಂಡಿರುವುದನ್ನು ಹಿಂಬಾಲಿಸುವ (ಟ್ರಾಕ್ ಮಾಡುವ) ಮೇಲ್ವಿಚಾರಣೆ ವ್ಯವಸ್ಥೆಯನ್ನು ಸ್ಥಾಪಿಸುವುದು.

**14. ರಾಷ್ಟ್ರೀಯ ಪರಿಷತ್ತು** – (1) ರಾಷ್ಟ್ರೀಯ ಪರಿಷತ್ತು ಕಾಯ್ದೆಯ ವಿಭಾಗ 17 ರ ಪ್ರಕಾರ ಕಾರ್ಯಗಳನ್ನು ನಿರ್ವಹಿಸುತ್ತದೆ.

**(2) ರಾಷ್ಟ್ರೀಯ ಸಾಮಾಜಿಕ ರಕ್ಷಣಾ ಸಂಸ್ಥೆಯು** (ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಸೋಶಿಯಲ್ ಡಿಫೆನ್ಸ್) ರಾಷ್ಟ್ರೀಯ ಪರಿಷತ್ತಿಗೆ ತನ್ನ ಸಭೆಗಳನ್ನು ನಡೆಸಲು ಕಾರ್ಯದರ್ಶೀಯ (ಸೆಕ್ರೆಟೇರಿಯಲ್) ಬೆಂಬಲವನ್ನು ನೀಡುತ್ತದೆ ಮತ್ತು ರಾಷ್ಟ್ರೀಯ ಪರಿಷತ್ತಿನ ಕಾರ್ಯಗಳನ್ನು ನಿರ್ವಹಿಸಲು ಅನುಕೂಲವಾಗುತ್ತದೆ.

[ಎಫ್.ನಂ. 17–2/2019–ಡಿಪಿ–II]
ರಾಧಿಕ ಚಕ್ರವರ್ತಿ, ಜಂಟಿ, ಕಾರ್ಯದರ್ಶಿ